BKN-22

Sl.No. :

Total No. of Pages : 4

ದ್ವಿತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್- 2025

(SLM Scheme)

ಐಚ್ಛಿಕ ಕನ್ನಡ (ಪತ್ರಿಕೆ–೨)

ನಡುಗನ್ನಡ ಮತ್ತು ಹೊಸಗನ್ನಡ ಪದ್ಯಗಳು

(ಬಸವರಾಜದೇವರ ರಗಳೆ, ಹರಿಶ್ಚಂದ್ರ ಕಾವ್ಯ ಸಂಗ್ರಹ, ಕೆ.ಎಸ್.ನ ಅವರ ಆಯ್ದ ಕವನಗಳು ಮತ್ತು ಬೆರಳ್‌ಗೆ ಕೊರಳ್)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ.*

<u>ವಿಭಾಗ–ಎ</u>

(ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ) (20 ಅಂಕಗಳು)

ಪ್ರ1) ೧) <u>ಎರಡರ</u> ಭಾವವನ್ನು ಸಂದರ್ಭ ಸಹಿತ ವಿವರಿಸಿ. **[2×4=8]**

ತಾಯ್ಗಳುಮ್ಮಳಿಸಲಾಗದು ಕಱುಗಳಂ ಬಿಡಿರೆ
ಬೇಗ ಮೊಲೆತೊರೆದು ಮರುಗುವವು ಕರುವಂಬಿಡಿರೆ।
ಮಕ್ಕಳುಗಳವ್ವೆಗಳು ನೋಯಲಾಗದು ಬಿಡಿರೆ
ಮಿಕ್ಕನೆನಹಿಂ ಮಲಮಲಂ ಮರುಗುವವು ಬಿಡಿರೆ।
ಎಲೆಲೆ ತಾಯ್ ಕಱುಗೂಡಿರೇ ಬೇಗದೊಳು ಬಿಟ್ಟು
ಎಲೆಲೆ ಅಗಲಿರಲಾರ್ಪವೇ ಮಕ್ಕಳಂ ಬಿಟ್ಟು।

ಅಥವಾ

ಸಂಗಯ್ಯ ಬಾಯೆಂದು ಕರೆವೆ ನೀನೆನ್ನುವಂ
ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ।
ಶರಣರೊಕ್ಕುದಱ ಸವಿ ಕೈಲಾಸದೊಳಗುಂಟೆ
ಶರಣಸಂಗದ ಸುಖಂ ಕೈಲಾಸದೊಳಗುಂಟೆ।
ಇಲ್ಲಿಯ ಸುಖಂ ದೇವ ಅಲ್ಲಿಯುಳ್ಳಡೆ ಲೇಸು
ಅಲ್ಲೆನ್ನೆ ಈಗಳೆ ಕೊಂಡು ಹೋಹುದು ಲೇಸು।

೨) ಅಕ್ಕಕ್ಕು ಬಚ್ಚಲುದಕಂ ತಿಳಿದಡಾರ ಮೀ
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳಡಾವನೂ
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ
ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ
ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇ
ತಕ್ಕೆ ಯೋಗ್ಯಂ ರಮಿಸಿದವರುಂಟೆ ಶಿವಶಿವೀ ಮಾತು ತಾ ಹೊಲೆಯೆಂದನು

ಅಥವಾ

ಕೊಟ್ಟವಧಿಯಂ ನೆನೆದು ನೋಡಿ ಹವ್ವನೆ ಹಾಜೆ
ಮುಟ್ಟಿಬಂದುದು ದಿನಂ ಕೈಕೊಂಡ ತೆಱದವಂ
ಕಟ್ಟುಗ್ರನಭ್ಯಾಸದವರಿಲ್ಲ ಚಾಚಲಡಪಿಲ್ಲ ನಾಂ ಕುಲಧರ್ಮವ
ಬಿಟ್ಟು ತಿರಿವವನಲ್ಲ ವೋಲೈಸಿ ನೇಱೆ ಲಜ್ಜೆ
ಗೆಟ್ಟು ಬೇಡುವಡಿಲ್ಲಿ ದೊರೆಯಿಲ್ಲ ಕೃಷಿಯಿಂದ
ಹುಟ್ಟಿಸುವೆನೆಂಬಡೆಡೆಯಿಲ್ಲವಿನ್ನೇಗೆಯ್ವೆನೆಂದು ಮಱುಗಿದನರಸನು

ಪ್ರ2) <u>ಎಂಟು</u> ಪದಗಳಿಗೆ ಅರ್ಥ ಬರೆಯಿರಿ. **[8×½=4]**

ಗಣಕರು, ಅವಧರಿಸು, ವತ್ಸ, ಪಯ, ಬಲ್ಲಹ, ಮೀಹ, ಬೊಳ್ಳೈಸು ಭಾಳ, ಹಗ್ಗಿ, ತೀಡು.

ಪ್ರ3) <u>ಒಂದು</u> ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ: **[1×4=4]**

೧) ಬಿಜ್ಜಳ
೨) ಚಂದ್ರಮತಿ

ಪ್ರ4) <u>ಎರಡರ</u> ಸಂದರ್ಭ ಸ್ವಾರಸ್ಯವನ್ನು ವಿವರಿಸಿ. **[2×2=4]**

೧) ಹರನನರಿಯದ ಹೊಲೆಯರ ಮನೆಯಂ ಪೊಕ್ಕುದಿಲ್ಲ

ಅಥವಾ

ಒಡೆಯರೊಡವೆಯನೆಳಸೆ ಕೊಡದಿಪ್ಪುದುಂ ನಯವೆ

೨) ಕಡೆಗೆ ಮೆಣಸು ಹುಳಿತಡೆ ಚೋಳದಿಂ ಕುಂದೆ

ಅಥವಾ

ಹೆತ್ತ ತಾಯಂ ಮಾಜೆ ತೊತ್ತ ಕೊಂಬರೆ

ವಿಭಾಗ–ಬಿ

(ಬಸವರಾಜದೇವರ ರಗಳೆ, ಹರಿಶ್ಚಂದ್ರ ಕಾವ್ಯ ಸಂಗ್ರಹ) (30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಬಸವರಾಜದೇವರ ರಗಳೆಯಲ್ಲಿ ಬರುವ ಪವಾಡಗಳ ವೈಶಿಷ್ಟ್ಯ ಮತ್ತು ಔಚಿತ್ಯವನ್ನು ವಿವರಿಸಿ.

೨) ಬಸವಣ್ಣನವರ ಹರೆಯದ ವರ್ಣನೆಯನ್ನು ಕವಿ ಚಿತ್ರಿಸಿರುವ ಬಗೆ ಹೇಗೆ? ವಿಶ್ಲೇಷಿಸಿ.

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಚಂದ್ರಮತಿಯ ಪ್ರಲಾಪದ ಪ್ರಸಂಗವು ಶೋಕ ಮತ್ತು ಕರುಣಾರಸದ ಮಡುವಾಗಿ ಮೂಡಿಬಂದಿರುವ ಬಗೆಯನ್ನು ವಿವರಿಸಿ.

೨) 'ಹರನೆಂಬುದೇ ಸತ್ಯ ಸತ್ಯವೆಂಬುದೆ ಹರನು' ಎಂಬ ತತ್ತ್ವ ಹರಿಶ್ಚಂದ್ರ ಕಾವ್ಯದಲ್ಲಿ ಮೂಡಿಬಂದಿರುವ ಬಗೆ ಹೇಗಿದೆ? ವಿವರಿಸಿ.

ಪ್ರ7) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **[2×5=10]**

೧) ಲೆಂಕರಸನು ಓಲೆಯನ್ನು ಅಪಹರಿಸಿದ ಪ್ರಸಂಗ.

ಅಥವಾ

ಕಿನ್ನರಯ್ಯನ ಉಳ್ಳಿಯ ಪ್ರಸಂಗ.

೨) ವಸಿಷ್ಠ–ವಿಶ್ವಾಮಿತ್ರರ ವಿವಾದ.

ಅಥವಾ

ಲೋಹಿತಾಶ್ವನ ಮರಣದ ಪ್ರಸಂಗ.

ವಿಭಾಗ–ಸಿ

(ಕೆ.ಎಸ್.ನ ಅವರ ಆಯ್ದ ಕವನಗಳು, ಬೆರಳ್‌ಗೆ ಕೊರಳ್) (30 ಅಂಕಗಳು)

ಪ್ರ8) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) 'ಗಡಿಯಾರದಂಗಡಿಯ ಮುಂದೆ' ಕವನದ ಆಶಯವನ್ನು ವಿಶ್ಲೇಷಿಸಿ.

೨) 'ಕುಂಕುಮ ಭೂಮಿ' ಕವಿತೆಯಲ್ಲಿ ಭೂಮಿ ಮತ್ತು ಮನುಷ್ಯ ಸಂಬಂಧವು ಭೂತ–ವರ್ತಮಾನದ ನೆಲೆಯಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

ಪ್ರ9) <u>ಒಂದು</u> ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ. **[1×5=5]**

೧) ತೆರೆದ ಬಾಗಿಲು

೨) ರೈಲ್ವೆ ನಿಲ್ದಾಣದಲ್ಲಿ

ಪ್ರ10)<u>ಒಂದು</u> ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಗುರು, ಕರ್ಮ ಮತ್ತು ಯಜ್ಞ ತತ್ತ್ವಗಳು 'ಬೆರಳ್‌ಗೆ ಕೊರಳ್' ನಾಟಕದಲ್ಲಿ ಹೇಗೆ ಪ್ರತಿಬಿಂಬಿತವಾಗಿವೆ? ವಿವರಿಸಿ.

೨) 'ಬೆರಳ್‌ಗೆ ಕೊರಳ್' ನಾಟಕದ ಏಕಲವ್ಯನ ಪಾತ್ರ ಚಿತ್ರಣದ ವೈಶಿಷ್ಟ್ಯವೇನು? ವಿವರಿಸಿ.

ಪ್ರ11)<u>ಒಂದು</u> ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ. **[1×5=5]**

೧) ದ್ರೋಣರ ಪಾತ್ರ ಚಿತ್ರಣ

೨) ಅಶ್ವತ್ಥಾಮನ ಪಾತ್ರದ ವೈಶಿಷ್ಟ್ಯ

